# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 665 |
| ಸದಸ್ಯರ ಹೆಸರು | : | ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 17-12-2021. |
| ಉತ್ತರಿಸುವವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಇತ್ತೀಚೆಗೆ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಕರಜಗಿ ಗ್ರಾಮ ಪಂಚಾಯಿತಿಯ ಪಿಡಿಓ ಒಬ್ಬರನ್ನು ಅಮಾನತ್ತು ಮಾಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ಕಾರಣಕ್ಕೆ ಅಮಾನತ್ತು ಮಾಡಲಾಗಿದೆ; ಈ ಅಧಿಕಾರಿಯ ಮೇಲೆ ಇರುವ ಆರೋಪಗಳು ಯಾವುವು; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಅಫಜಲಪೂರ ತಾಲ್ಲೂಕಿನ ಕರ್ಜಗಿ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ಬಶೀರ ಜಮಾದರ, ಇವರು ಅಧಿಕಾರ ದುರುಪಯೋಗಪಡಿಸಿಕೊಂಡು ಮೇಲಾಧಿಕಾರಿಗಳ ಆದೇಶ ಪಾಲನೆ ಮಾಡದೆ ಕರ್ತವ್ಯಲೋಪ ಎಸಗಿರುವುದು ಹಾಗೂ ಸರ್ಕಾರದ ಮಾರ್ಗಸೂಚಿ ಉಲ್ಲಂಘನೆ ಮಾಡಿರುವುದರಿಂದ ಶಿಸ್ತು ಅಧಿಕಾರಿಯಾದ ಕಲಬುರಗಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಸದರಿಯವರನ್ನು ಆದೇಶ ಸಂ:ಜಿಪಗು/ಆಡಳಿತ/ಪಿಡಿಓ/ 2021-22/1311, ದಿನಾಂಕ:26-10-2021 ರಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 10 ರನ್ವಯ ಅಮಾನತ್ತಿನಲ್ಲಿಟ್ಟು ಆದೇಶಿಸಲಾಗಿದೆ.<br><br>ಆದೇಶದ ಪ್ರತಿ ಅನುಬಂಧದಲ್ಲಿ ನೀಡಿದೆ. |
| (ಆ) | ಈ ಅಧಿಕಾರಿಯು ಕರಜಗಿ ಗ್ರಾಮದಲ್ಲಿರುವ ಮಹಿಳಾ ಬಯಲು ಶೌಚಾಲಯಕ್ಕಾಗಿ ವಾರ್ಡ್ ನಂ.1 ರಲ್ಲಿ ಇರಿಸಿರುವ ಗೋಮಾಳ ಜಾಗವನ್ನು ಬೇರೊಬ್ಬರ ಜಾಗವಾದ ಫ್ಲಾಟ್ ನಂ.1-255 (ವಿಸ್ತೀರ್ಣ 10+10 ಅಡಿ ಮಾತ್ರ)ಗೆ ಅಕ್ರಮವಾಗಿ ಕಬ್ಜಾಗೊಳಿಸಿ ಸೇರಿಸಿ ಒಟ್ಟು 30*40 ಫ್ಲಾಟ್ ಮಾಡಿಸಿಕೊಟ್ಟು ನಂತರ ಇದನ್ನು ಅವರ ಹೆಸರಿನಲ್ಲಿ ಇ-ಸ್ವತ್ತು ಕೂಡ ಮಾಡಲಾಗಿದ್ದು, ಗ್ರಾಮದ ಮಹಿಳೆಯರ ಆಕ್ಷೇಪದ ನಡುವೆಯೂ ಮೇಲಾಧಿಕಾರಿಗಳಿಗೂ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು; | ಸದರಿ ಆರೋಪದ ಕುರಿತು ತನಿಖೆಯು ಪ್ರಗತಿಯಲ್ಲಿರುತ್ತದೆ. |
| (ಇ) | ಈ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳು ಗ್ರಾಮಸ್ಥರ ಯಾವುದೇ ಕೆಲಸಗಳನ್ನು ತ್ವರಿತ ಗತಿಯಲ್ಲಿ ಮಾಡದೇ ಬೇಜವಾಬ್ದಾರಿತನದಿಂದ ವರ್ತಿಸುತ್ತಿರುವ ಆರೋಪಗಳು ಬಂದಿದ್ದರೂ ಕೂಡ ಮೇಲಾಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು? | ಸದರಿ ಆರೋಪದ ಕುರಿತು ಯಾವುದೇ ದೂರುಗಳು ಸ್ವೀಕೃತಗೊಂಡಿರುವುದಿಲ್ಲ. |

ಸಂಖ್ಯೆ: ಗ್ರಾಅಪ 423 ಗ್ರಾಪಂಅ 2021

**(ಕೆ.ಎಸ್. ಈಶ್ವರಪ್ಪ)**

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.